
## ಕಥೋಪದೇಶ



# ಸಂಸಾರದ ಮಾಯೆ ಕಳಚಿದಾಗ

ಸಂತ ಏಕನಾಥರು ಜನಾರ್ದನ ಸ್ವಾಮಿಗಳ ಶಿಷ್ಯರು. ಜನಾರ್ದನ ಸ್ವಾಮಿಗಳು ದೇವಗಢ ಎಂಬಲ್ಲಿ ಉನ್ನತ ಹುದ್ದೆಯ ಅಧಿಕಾರಿ ಕೂಡ ಆಗಿದ್ದರು. ತಮ್ಮ ಎಲ್ಲ ವ್ಯವಹಾರಗಳಲ್ಲಿ ಏಕನಾಥನು ಪಳಗಬೇಕೆಂದು ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ತಮ್ಮ ಶಿಷ್ಯನಿಗೆ ಒಪ್ಪಿಸಿದರು. ಏಕನಾಥನು ಈ ಕೆಲಸವನ್ನು ಗುರುಸೇವೆಯೆಂದೇ ಭಾವಿಸುತ್ತ ಅತ್ಯಂತ ಭಕ್ತಿ ಹಾಗೂ ಏಕಾಗ್ರತೆಯಿಂದ ಮಾಡುತ್ತಿದ್ದನು.

ಒಂದು ದಿನ ಲೆಕ್ಕ ನೋಡುತ್ತಿದ್ದಾಗ ಒಂದು ಪೈಸೆ ಕಮ್ಮಿ ಇರುವುದು ಗೊತ್ತಾಯಿತು. ತಪ್ಪನ್ನು ಹುಡುಕುತ್ತ ಪುನಃ ಪುನಃ ಪರಿಶೀಲಿಸತೊಡಗಿದನು. ರಾತ್ರಿ ಮೂರು ಘಂಟೆಯಾದರೂ ತಪ್ಪನ್ನು ಕಂಡುಹಿಡಿಯಲು ಆಗಲಿಲ್ಲ. ಇಷ್ಟರಲ್ಲಿ ಜನಾರ್ದನ ಸ್ವಾಮಿಗಳಿಗೆ ಎಚ್ಚರವಾಗಲು ಏಕನಾಥನ ಕೋಣೆಯಲ್ಲಿ ದೀಪದ ಬೆಳಕನ್ನು ಕಂಡು ಆಶ್ಚರ್ಯಪಟ್ಟರು. ಎದ್ದು ಬಂದು ಅವನೇನು ಮಾಡುತ್ತಿದ್ದಾನೆ ಎಂದು ನೋಡುತ್ತಿದ್ದಂತೆಯೇ ಏಕನಾಥನಿಗೆ ತಾನು ಲೆಕ್ಕದಲ್ಲಿ ಮಾಡಿದ್ದ ತಪ್ಪು ಸಿಕ್ಕಿಬಿಟ್ಟಿತು. ಆನಂದದಿಂದ ಜೋರಾಗಿ ಕುಣಿಯುತ್ತ ಚಪ್ಪಾಳೆ ತಟ್ಟಲಾರಂಭಿಸಿದನು. ಆಗ ಅಲ್ಲಿಗೆ ಬಂದಿದ್ದ ಜನಾರ್ದನ ಸ್ವಾಮಿಗಳು "ಏಕೆ ಹೀಗೆ ಇಂತಹ ರಾತ್ರಿ ವೇಳೆಯಲ್ಲಿ ಕುಣಿಯುತ್ತಿರುವೆ?" ಎಂದಾಗ ಏಕನಾಥ ಎಲ್ಲ ವಿಷಯವನ್ನೂ ತಿಳಿಸಿದ.

ಆಗ ಗುರುಗಳು ಹೇಳಿದರು, "ಒಂದೇ ಒಂದು ಪೈಸೆಯ ಲೆಕ್ಕ ತಪ್ಪಾಗಿದ್ದು, ಅದನ್ನು ಕಂಡುಹಿಡಿದಾಗ ನಿನಗೆ ಇಷ್ಟೊಂದು ಸಂತೋಷವಾಯಿತು. ಈ ಸಂಸಾರದಲ್ಲಿ ನೀನು ಇದ್ದುಕೊಂಡು ಪ್ರಾಪಂಚಿಕತೆಯ ತಪ್ಪನ್ನು ಮಾಡುತ್ತಿರುವೆ. ಇದರ ಅರಿವು ನಿನಗೆ ಬಂದರೆ ನಿನಗೆ ಇನ್ನೆಷ್ಟು ಆನಂದವಾಗಬೇಡ! ಭಗವಂತನ ಧ್ಯಾನವನ್ನು ಮಾಡಿದರೆ, ಭಕ್ತಿಯಿಂದ ಅವನನ್ನು ಕರೆದರೆ, ಅವನ ಕೃಪೆಯಿಂದ ಕ್ಷಣಮಾತ್ರದಲ್ಲಿ ಈ ಬಂಧನ ಕಳಚುವುದು." ಗುರುವಿನ ಈ ಮಾತುಗಳು ಏಕನಾಥನ ಮನಸ್ಸನ್ನು ತಕ್ಷಣ ಆಕರ್ಷಿಸಿದವು. ಅವನಿಗೆ ಆ ಗಳಿಗೆಯಲ್ಲಿ ತನ್ನ ಗುರಿ ನಿಚ್ಚಳವಾಗಿ ಕಾಣಿಸಿತು. ಗುರುವಿನ ಆಶೀರ್ವಾದ ಪಡೆದು ಏಕನಾಥನು ಹಗಲೂ ರಾತ್ರಿ ದತ್ತಾತ್ರೇಯನ ಸ್ಮರಣೆ–ಭಜನೆಗಳಲ್ಲಿ ಕಳೆದು, ಭಗವಂತನ ದರ್ಶನವನ್ನು ಪಡೆಯುವಲ್ಲಿ ಸಫಲನಾದನು.



ಆಧಾರ : ಪ್ರೇರಕ ಪ್ರಸಂಗ್

ಚಿತ್ರ : ಪುರುಷೋತ್ತಮ ಕಾರಂತ